**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 396/2023**

ಹೆಸರುಃ ರೂಪೇಶ್ ಜಿ ವಿ ಸಿ.ಡಬ್ಲ್ಯೂಃ 12

ವಯಸ್ಸುಃ 46 ಪಿ.ಡಬ್ಲ್ಯೂಃ 7

ತಂದೆಃ ರಂಗ್ಯಾ ನಾಯಕ್

ಉದ್ಯೋಗಃ ಹೆಚ್ ಸಿ ಚನ್ನಗಿರಿ ಪೋ.ಠಾ.

ವಾಸ ಸ್ಥಳಃ ಚನ್ನಗಿರಿ.

ಸಾಕ್ಷಿಗೆ ದಿನಾಂಕಃ 11.06.2025 ರಂದು ಪ್ರಮಾಣ ವಚನ ಬೋಧಿಸಲಾಗಿ ಸಾಕ್ಷಿ ಯ ಹೇಳಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

2019 ರಿಂದ ಇಲ್ಲಿಯವರೆಗೆ ಮುಖ್ಯ ಪೇದೆಯಾಗಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಕತರ್ವ್ಯನಿರ್ವಹಿಸುತ್ತಿದ್ದೇನೆ.

ದಿಃ 18.07.2021 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ, ಸದರಿ ದೂರಿನ ಮೇರೆಗೆ ಠಾಣಾ ಗುನ್ನೆ ಸಂಃ 251/2021ರ ಭಾ.ದಂ.ಪ್ರ.ಸಂ. ಕಲಂ 392 ರ ಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ.

ಸಾಕ್ಷಿ ಕಡತದಲ್ಲಿ ಸದರಿ ದೂರನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದೆ . ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು . ಸದರಿ ದೂರಿನ ಮೇಲೆ ದಾಖಲಿಸಲಾದ ಪ್ರ ವ ವ ಸಾಕ್ಷಿ ನೋಡಿ ಗುರುತಿಸಿದ್ದು , ಸದರಿ ಪ್ರ.ವ.ವಯನ್ನು ನಿ ಪಿ 7 , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು .

ಸದರಿ ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಚಾಸಾ.14 ರವರಿಗೆ ವಹಿಸಿಕೊಟ್ಟಿರುತ್ತೇನೆ.

ದಿನಾಂಕಃ 20.07.2021 ರಂದು 1 ಮತ್ತು 2 ನೇ ಆರೋಪಿತರು ಸಿಕ್ಕಿರುವ ಕುರಿತು ಚಾಸಾ.14 ರವರು ನಮಗೆ ಆರೋಪಿತರ ಬೆಂಗಾವಲಿಗೆ ಬರಲು ತಿಳಿಸಿರುತ್ತಾರೆ. ಆಗ ಅಲ್ಲೇ ಇದ್ದ ಚಾಸಾ.4 ಮತ್ತು 5 ರವರ ಮೇಲೆ ಚಾಸಾ.14 ರವರು ಪಂಚರಾಗಿ ಸಹಕರಿಸಲು ನೇಟೀಸನ್ನು ಜಾರಿ ಮಾಡಿ ಆರೋಪಿತರು ತೋರಿಸಿದ ಕೃತ್ಯ ನಡೆದ ಸ್ಥಳವಾದ ಅಗರಬನ್ನಿಹಟ್ಟಿ ಗ್ರಾಮದ ಶಾಮೀರ್ ಜಾನ್ ರವರ ಮನೆಯ ಮುಂದೆ ಆರೋಪಿತರು ವಾಹನವನ್ನು ನಿಲ್ಲಿಸಲು ಹೇಳಿದ್ದು ಅದರಂತೆ ನಾವು ವಾಹನದಿಂದ ಇಳಿದಿದ್ದು , ಆರೋಪಿತರು ದಿಃ 18.07.2021 ರಂದು ರಾತ್ರಿ 11.00 ಗಂಟೆಗೆ ಅಗರನಿನ್ನಹಟ್ಟಿಯಿಂದ ಬೀರೂರು ಸಮಸಗಿ ರಸ್ತೆಯಲ್ಲಿ ಹೋಗಿ ವಾಪಾಸ್ಸು ಅಗರಬನ್ನಿಹಟ್ಟಿ ಗ್ರಾಮಕ್ಕೆ ಬರುತ್ತಿರುವಾಗ ಒಬ್ಬ ವ್ಯಕ್ತಿ ಬೈಕ್ ನಲ್ಲಿ ಬರುತ್ತಿದ್ದು ಆತನಿಗೆ ವಿಳಾಸ ಕೇಳುವ ನೆಪದಲ್ಲಿ ಆತನ ಬೈಕ್ ನಿಲ್ಲಿಸಲು ಕೇಳಿದ್ದು ಆತ ಬೈಕ್ ನಿಲ್ಲಿಸಿದಾಗ ಸದರಿ ಬೈಕ್ ಸವಾರನಿಗೆ ಆರೋಪಿತರು ಚಾಕುವನ್ನು ತೋರಿಸಿ ನಿನ್ನ ಬಳಿ ಇರುವ ದುಡ್ಡು ಮತ್ತು ಆಭರಣಗಳನ್ನು ಕೊಡುವಂತೆ ಕೇಳಿರುತ್ತಾರೆಂದು ಆಗ ಸದರಿ ಚಾಲಕ ತನ್ನ ಬಳಿ ಯಾವುದೇ ದುಡ್ಡು ಮತ್ತು ಆಭರಣ ಇಲ್ಲ ಎಂದು ತಿಳಿಸಿರುವುದಾಗಿ ತನ್ನ ಬಳಿ ಒಂದು ಮೊಬೈಲ್ ಮತ್ತು ಹಿಯರ್ ಫೋನ್ ಇರುವುದಾಗಿ ತಿಳಿಸಿದ್ದು ಅದನ್ನು 1 ನೇ ಆರೋಪಿ ಕಸಿದುಕೊಂಡಿರುವುದಾಗಿ ನಮಗೆ ಆರೋಪಿತರು ತಿಳಿಸಿರುತ್ತಾರೆ. ಸದರಿ ಸ್ಥಳದಲ್ಲಿ ನಾವು 9.00 ರಿಂದ 9.30 ರ ವರಗೆ ಪಂಚನಾಮಯನ್ನು ಜರುಗಿಸಿರುತ್ತೇವೆ. ಸದರಿ ಸಮಯಕ್ಕೆ ನಾನು ಮತ್ತು ಆರೋಪಿತರು ಚಾಸಾ.14 ರವರು ಮತ್ತು ಇತರೆ ಇಲಾಖೆ ಸಿಬ್ಬಂದಿಯವರು ಸಹಿ ಮಾಡಿರುತ್ತೇವೆ. ಸದರಿ ಸಮಯಕ್ಕೆ ಭಾವಚಿತ್ರವನ್ನು ತೆಗೆಯಲಾಯಿತು.

ಸಾಕ್ಷಿ ಕಡತದಲ್ಲಿನ ಸದರಿ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿನ ಸದರಿ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದೆ. ನಂತರ ಜೀಪಿನಲ್ಲಿ ಪಂಚರ ಮತ್ತು ಆರೋಪಿತರೊಂದಿಗೆ ಗದ್ದಿಗೆ ಮಠದ ಹತ್ತಿರ ಇರುವ 1 ನೇ ಆರೋಪಿಯ ಮನೆ ಬಳಿ ಬಂದು ಸದರಿ ಸಮಯಕ್ಕೆ ಒಂದು ಮೊಬೈಲ್ , ಇಯರ್

ಫೋನ್ ಮತ್ತು ಬೈಕ್ ಇದ್ದು ಸದರಿ ಬೈಕ್ ನಲ್ಲಿ ಚಾಕುವು ಸಹ ಇರುತ್ತದೆ. ಅವನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡು ಭಾವಚಿತ್ರವನ್ನು ತೆಗೆಯಲಾಗಿದೆ. ಸದರಿ ಬೈಕ್ ಸಂಖ್ಯೆ ಕೆ ಎ 27 ಇಜಿ 3306 ಆಗಿರುತ್ತದೆ. ಸಾಕ್ಷಿ ಕಡತದಲ್ಲಿನ 1 ನೇ ಆರೋಪಿ ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.8 ಎಂದು ಹಾಗೂ ಅದರಲ್ಲಿನಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ನಿಶಾನೆಗೊಳಿಸಲಾಯಿತು. ಸದರಿ ಪಂಚನಾಮೆಯನ್ನು 10.00 ರಿಂದ 11.00 ಗಂಟೆಯವರಗೆ ಜರುಗಿಸಲಾಗಿದ್ದು ಸದರಿ ಸಮಯಕ್ಕೆ ಎರಡು ಭಾವಚಿತ್ರಗಳನ್ನು ತೆಗೆಯಲಾಗಿರುತ್ತದೆ. ಸಾಕ್ಷಿ ಕಡತದಲ್ಲಿನ ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.9 ಮತ್ತು 10 ಎಂದು ನಿಶಾನೆಗೊಳಿಸಲಾಯಿತು. ಸದರಿ ನಿಪಿ.8 ರ ಸಮಯಕ್ಕೆ ವಶಕ್ಕೆ ಪಡೆದ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮು.1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಆರೋಪಿ ಯನ್ನು ಗುರುತಿಸುವ ಪ್ರಕ್ರಿಯೆಗೆ ಯಾವುದೇ ತಕರಾರು ಇಲ್ಲ ಎಂದು ಮೌಖಿಕವಾಗಿ ನಿವೇದಿಸಿಕೊಂಡಿರುತ್ತಾರೆ.

**ಪಾಟೀಸವಾಲು ಆರೋಪಿತರ ಪರ ಶ್ರೀ ವಿ ಆರ್ ಆರ್ ವಕೀಲರಿಂದಃ**

ಘಟನೆ ನೆಡದ ದಿನದಂದೇ ನಾನು ದೂರನ್ನು ಪಡೆದು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸಾಕ್ಷಿ ಮಾರನೇ ದಿನ ದೂರು ಸ್ವೀಕರಿಸಿ ಪ್ರಕರಣ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.4 ರ ಪಂಚನಾಮೆಯ ಸಾಕ್ಷಿಧಾರರು ಚನ್ನಗಿರಿಯಲ್ಲಿ ಇದ್ದರು. ಸದರಿಯವರನ್ನು ಪರಶುರಾಮ ಎಂಬ ಪಿ ಸಿ ಕರೆದುಕೊಂಡು ಬಂದಿರುತ್ತಾರೆ. ನಿಪಿ.4 ನ್ನು ಸ್ಥಳದಲ್ಲೇ ತಯಾರಿಸಿರುತ್ತೇವೆ. ಸದರಿ ದಾಖಲೆಗೆ ಸಾಕ್ಷಿಧಾರರ ಸಹಿಯನ್ನೂ ಸಹ ಸ್ಥಳದಲ್ಲೇ ಪಡೆದುಕೊಂಡಿರುತ್ತೇವೆ. ನಿಪಿ.4 ರ ಪ್ರಿಂಟ್ ನ್ನು ಎಲ್ಲಿ ತೆಗೆದಿರುತ್ತೀರಿ ಎಂದರೆ ಸಾಕ್ಷಿ ಶಾಮೀರ್ ಜಾನ್ ರವರ ಮನೆಯಲ್ಲಿ ತೆಗೆದಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ.5 ರಲ್ಲಿ ಪ್ರಿಂಟರ್ ಕಾಣಿಸುತ್ತಿಲ್ಲ ಎಂದರೆ ಸಾಕ್ಷಿ ವಾಹನದಲ್ಲಿ ಇತ್ತು

ಎಂದು ನುಡಿಯುತ್ತಾರೆ. ನಿಪಿ.8 ನ್ನು ದಿಃ 20.07.2020 ರಂದು ಮಾಡಲಾಗಿದೆ. ನಿಪಿ.8ರ ಪಂಚರಿಗೆ ನೋಟೀಸನ್ನು ಜಾರಿ ಮಾಡಿರುತ್ತೇವೆ. ನಿಪಿ.8ರ ಪ್ರಿಂಟ್ ನ್ನು ಆರೋಪಿಯ ಮನೆಯ ಪಕ್ಕದಲ್ಲಿ ತೆಗೆಯಲಾಗಿರುತ್ತದೆ. ಸದರಿ ನಿಪಿ.9 ಮತ್ತು 10 ರಲ್ಲಿ ಪ್ರಿಂಟರ್ ಕಾಣಿಸುತ್ತಿಲ್ಲ ಎಂದರೆ ಸರಿ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ಮತ್ತು 8 ನ್ನು ಠಾಣೆಯಲ್ಲೇ ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಸದರಿ ದಿನಾಂಕದಂದು ಆರೋಪಿತರನ್ನು ಗುರುತಿಸಲು ಹೋಗಿಲ್ಲ ಎಂದರೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪಕರಣಕ್ಕೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ಮತ್ತು 8 ನ್ನು ಠಾಣೆಯಲ್ಲೇ ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ಆರೋಪಿತರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದರೆ 1 ನೇ ಆರೋಪಿ ಕೆಂಪು ಬಿಳಿ ಬಣ್ಣದ ಟೀ ಶರ್ಟ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದು ಮತ್ತು 2ನೇ ಆರೋಪಿ ಬಿಳಿ ಕಂದು ಬಣ್ಣದ ಟೀ ಶರ್ಟ ನ್ನು ಮತ್ತು ಜಿನ್ಸ್ ಪ್ಯಾಂಟ್ ನ್ನು ಧರಿಸಿರುತ್ತಾನೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಏನನ್ನೂ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**